continued working. A regularly constituted managing committee is necessary. Existence of suitable assets including buildings, the present level of activity of institutions as expressed in the terms and conditions—these are some more conditions.

Deaths in the Electricity Department due to Electric Shocks

Q.—1575. Smt. K. S. NAGARATHNAMMA (Gundlupet).—

Will the Government be pleased to state :—

(*a*) the number of employees of the Electrical Department who died due to electric shocks and other risks during the last one year ;

(*b*) the persons responsible for inspecting and reporting of such incidents ?

A.—Sri H. K. VEERANNA GOWDH (Minister for Public Works).—

(*a*) 30 up to 15th December 1957 in the year 1957-58.

(*b*) The Government Electric Inspector and his staff.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—1957-58 ನೆಯ ವರ್ಷದಲ್ಲಿ 30 ಜನರು ಸತ್ತು ಹೋಗಿದ್ದಾರೆಂದು ಉತ್ತರದಲ್ಲಿ ಹೇಳಿದೆ. ಅವರ ಪೈಕಿ ಎಷ್ಟು ಜನರ ಕುಟುಂಬದವರಿಗೆ ಏನು ಕಾಂಪೆನ್‌ಸೇಷನ್ ಕೊಟ್ಟಿದ್ದೀರಿ ? ಅಂಥವರ ಮಕ್ಕಳ ವಿದ್ಯಾಭ್ಯಾಸದ ನಲುವಾಗಿ ಯಾವ ಅನುಕೂಲವನ್ನು ಮಾಡಿದ್ದೀರಿ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಸತ್ತು ಹೋಗಿರತಕ್ಕ ಜನರ ಸಂಸಾರಕ್ಕೆ ಕಾನೂನಿನ ಪ್ರಕಾರ ಎಷ್ಟು ಕೊಡಬೇಕೋ ಅಷ್ಟು ಹಣ ಪಾವತಿಯಾಗಿದೆ. ಒಂದು ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗೆ ಮೇಲ್ಪಟ್ಟು ಹಣ ಕೊಟ್ಟಿದೆ. ಇನ್ನು ಕೆಲವು ಸಂದರ್ಭದಲ್ಲಿ ಕಾಂಪೆನ್‌ಸೇಷನ್ ಎಷ್ಟು ಕೊಡಬೇಕೆಂಬುದು ಇನ್ನೂ ಸರಕಾರದ ಮಟ್ಟಕ್ಕೆ ಆ ವಿಷಯ ಬಂದಿಲ್ಲ, ಏಕೆಂದರೆ ಸತ್ಯವರ ಬಗ್ಗೆ ಇನ್ನೂ ರಿಕಾರ್ಡು ತಯಾರಾಗುತ್ತಾ ಇದೆ. ಇನ್ನು ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಓದುವುದಕ್ಕೆ ಏನೇನು ಅನುಕೂಲಗಳು ಬೇಕು, ಯಾವ ಸ್ಕೂಲಿಗೆ ಕಳಿಸಬೇಕು ಎಂಬುದನ್ನು ನೋಡಿಕೊಂಡು ಆ ಬಗೆಯ ಎಲ್ಲ ಸಹಾಯವನ್ನು ಮಾಡಲು ಸರಕಾರ ಸಿದ್ಧವಾಗಿದೆ.

Sri A. BHEEMAPPA NAIK.—What is the maximum relief that each person or his family gets in these cases ?

ಶ್ರೀ ಎಚ್. ಕೆ. ವೀರಣ್ಣಗೌಡ.—630 ರೂಪಾಯಿ ಕನಿಷ್ಠ ಮತ್ತು 1,050 ರೂಪಾಯಿ ಪರಮಾವಧಿ ಪರಿಹಾರ ಹಣ ಕೊಡುವುದಾಗಿದೆ. 800, 900, 810 ರೂಪಾಯಿ ಹೀಗೆ ಪರಿಹಾರವನ್ನು ಕೊಡಲಾಗಿದೆ. ಅವರ ಸರ್ವಿಸ್ ರಿಜಿಸ್ಟರ್ ಪ್ರಕಾರ ಕೊಟ್ಟಿದೆ. ಅವರು ಟೆಂಪರರಿ ರಿಜಿಸ್ಟರ್‌ಮೇಲೆ ಇದ್ದರೂ ಸಹ ಖಾಯಂ ಆದ ಹಾಗೆ ಇರುತ್ತಾರೆ. ಆರು ತಿಂಗಳು, ಎಂಟು ತಿಂಗಳು, ಒಂದು ವರ್ಷ ಸರ್ವಿಸ್ ಮಾಡಿದವರಿಗೆ ರೂಲ್ಸ್ ಪ್ರಕಾರ ಕಾಂಪೆನ್‌ಸೇಷನ್ ಕೊಟ್ಟಿದ್ದಾರೆ.

Sri A. BHEEMAPPA NAIK.—Will the Government give immediate relief ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ರೀತಿ ಕೊಟ್ಟಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್.—ಈ 30 ಜನರ ಕೇಸ್‌ನಲ್ಲಿ ಕೊಟ್ಟಿರತಕ್ಕ ಒಟ್ಟು ಹಣ ಎಷ್ಟು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಅಂಕಿ ಅಂಶಗಳು ಈಗ ನನ್ನ ಹತ್ತಿರ ಇಲ್ಲ. ಇನ್ನು ಕೆಲವು ಕಾಂಪೆನ್‌ಸೇಷನ್ ಕ್ಲೇಮ್ಸ್‌ಗಳ ರಿಕಾರ್ಡ್ಸ್ ತಯಾರಾಗುತ್ತಾ ಇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರಕಾರೀ ಇಲೆಕ್ಟ್ರಿಕ್ ಇನ್‌ಸ್ಪೆಕ್ಟರ್ ಮತ್ತು ಅವರ ಸಿಬ್ಬಂದಿ ವರ್ಗದವರು ತನಿಖೆಮಾಡಿ ವರದಿ ಮಾಡುತ್ತಾರೆಂದು ಉತ್ತರದಲ್ಲಿ ಹೇಳಿದೆ. ಹಾಗಾದರೆ ಇವರು ಗವರ್ನ್‌ಮೆಂಟ್ ಅಧಿಕಾರಕ್ಕೆ ಒಳಪಟ್ಟಿದ್ದಾರೋ ಅಥವಾ ಬೋರ್ಡ್ ಕೆಳಗೆ ಕೆಲಸಮಾಡುತ್ತಾರೋ ? ಪಾಸ್ಟ್ ಪಾಂಶಷನ್ನು ರಿಪೋರ್ಟ್ ಮಾಡುವಹಾಗೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್‌ಸ್ಪೆಕ್ಟರ್ ಇರುವುದು, under the direct control of Government and not under the Board.

Sri K. PUTTASWAMY.—Are such cases governed by the Workmen's Compensation Act ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನಲ್ಲಿ ರೂಲ್ಸ್, ಸ್ಟ್ಯಾಂಡಿಂಗ್ ಆರ್ಡರ್ಸ್ ಮಾಡಿಕೊಂಡಿದ್ದಾರೆ. ಆ ಪ್ರಕಾರ ತೀರ್ಮಾನ ಮಾಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಡೈರೆಕ್ಟ್ ಗವರ್ನ್‌ಮೆಂಟ್ ಕಂಟ್ರೋಲದಲ್ಲಿ ಇದ್ದುದಾದರೆ ಅಲ್ಲಿಗೆ ಒಬ್ಬ ಆಫೀಸರನ್ನು ಟ್ರಾನ್ಸ್‌ಫರ್ ಮಾಡುವುದಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಂಥ ಪರಿಸ್ಥಿತಿ ಉದ್ಭವಿಸಿಲ್ಲ.

Sri B. R. SUNTHANKAR.—When there are a number of casualties have the Government investigated into the causes of the accidents ?

Sri H. K. VEERANNA GOWDH.—The cause of each accident was investigated and there is record to show how it happened and all that ; there are details of the investigation.

Sri B. R. SUNTHANKAR.—May I know whether there were wounded persons ?

Sri H. K. VEERANNA GOWDH.—Yes ; about 81 non-fatal cases.

Sri B. R. SUNTHANKAR.—Have the Government contemplated measures to prevent such accidents hereafter ?

Sri H. K. VEERANNA GOWDH.—There are set rules and instructions to prevent accidents, which should be observed. In spite of that, these accidents do happen now and then.

ಶ್ರೀ ಬಿ. ರಾಚಯ್ಯ.—ಈ 30 ಜನರ ಪೈಕಿ ಎಷ್ಟು ಜನರು ಚೆಂಪರರಿ ಸ್ಟಾಫ್‌ನಲ್ಲಿದ್ದರು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲರೂ ಚೆಂಪರರಿ ಸ್ಟಾಫ್‌ನಲ್ಲಿಯೇ ಇದ್ದವರು.

ಶ್ರೀ ಬಿ. ರಾಚಯ್ಯ.—ಚೆಂಪರರಿ ಸ್ಟಾಫ್‌ಗೆ ಸೇರಿದವರಾಗಿದ್ದರೆ ಇವರಿಗೆ Workmen's Compensation Act apply ಆಗುತ್ತದೆಯೇ ಅಥವಾ M.S.R. ಅನ್ವಯವಾಗುತ್ತದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—M.S.R ರೂಲ್ಸ್ ಅನ್ವಯಿಸಲಾಗುವುದಿಲ್ಲ. Workmen's Compensation Act ಪ್ರಕಾರ ಕ್ರಮ ಕೈಕೊಳ್ಳಲಾಗುತ್ತದೆ.

Sri V. P. DEENADAYALU NAIDU.—The Minister was pleased to say that there were certain orders of Government under which compensation was paid. I should like to know how many have chosen to claim under the Workmen's Compensation Act ?

Sri H. K. VEERANNA GOWDH.—In every one of these cases they will be paid.

Sri V. P. DEENADAYALU NAIDU.—Does it mean that they do not get according to the Government Orders but only under the Workmen's Compensation Act ?

Sri H. K. VEERANNA GOWDH.—When the claims were finally settled, they would be settled under the Workmen's Compensation Act. In the meanwhile necessary assistance would be rendered to the families according to the Government rules.

ಶ್ರೀ ಜಿ. ವೆಂಕಟೇಗೌಡ.—ನತ್ತುಹೋದವರ ಪೈಕಿ ವಯಸ್ಸು ಕಡಮೆಯಾಗಿದ್ದವರಿಗೆ ಹೆಚ್ಚು ಪರಿಹಾರ ಕೊಡಲು ಸಾಧ್ಯವಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರೂಲ್ಸ್ ಪ್ರಕಾರ ಅದನ್ನು ನೋಡಿಕೊಳ್ಳಬೇಕಾಗುತ್ತದೆ.

Sri C. K. RAJAIAH SETTY.—Is it a fact that compensation is paid according to the wages ?

Sri H. K. VEERANNA GOWDH.—That is what I said. Wages, the period of service, etc., are all taken into consideration.

ಶ್ರೀ ಬಿ. ರಾಚಯ್ಯ.—ಎಷ್ಟು ಜನರು ಕೈಕಾಲು ಕಳೆದುಕೊಂಡವರು ಎಂಬುದಕ್ಕೆ ಒಂದು ಷಡ್ಯೂಲ್ ಇದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದೆ.

Mr. SPEAKER.—Question time is over.

QUESTIONS FOR ANSWERS ON THE DAY

(but not taken up)

Officials transferred from Departments to the Secretariat.

Q.—2273. Sri T. SUBRAMANYA (Turuvekere).—

Will the Government be pleased to state :—

(*a*) whether it is a fact that in or about the year 1945 there was a dearth of experienced officials in the former Mysore Government Secretariat;

(*b*) whether they issued any special order in May 1945 setting apart half the number of recruitable vacancies for qualified and experienced officials of departments to tone up the efficiency in the Secretariat and if so, whether a copy of the order would be placed on the table of the House ;

(*c*) whether cases of officials so brought from the departments to the Secretariat have been treated as one of transfer or fresh recruitment ;

(*d*) whether it is not a fact that transfers are effected in corresponding grades only ;

(*e*) if these cases have been treated as transfers in the interest of public service was any action taken to protect their prospects and promotions by counting service rendered by them in the department for purpose of their seniority in the Secretariat ;

(*f*) if not, whether it would not seriously affect their chances of promotions as their transfer to the Secretariat is on a permanent basis and in the interest of public service ;

(*g*) whether they consider the question of rectifying this wrong even now ?

A.—Sri S. NIJALINGAPPA (Chief Minister).—

(*a*) Yes.